ಈಶ್ವರ ಬಡಿಗೇರ



# ‘ಗಾಳಿಮಾಸ’ದ ಘಮಲು

ಆಷಾಢ ತಣ್ಣನೆಯ ಮಾಸ. ಈ ಮಾಸಕ್ಕೆ ಎದ್ದುಕಾಣುವ ಯಾವ ವಿಶೇಷಣಗಳ ಸಿಂಗಾರವೂ ಇಲ್ಲ. ಹಬ್ಬ ಹರಿದಿನಗಳ ಸಂಭ್ರಮ, ಮದುವೆ ಮುಂಜಿಗಳ ಗೌಜುಗದ್ದಲ್ಲ ಆಷಾಢಕ್ಕಿಲ್ಲ. ಹಾಗೆ ನೋಡಿದರೆ ಆಷಾಢ ಬಣ್ಣಗಳಿಲ್ಲದ ತಿಂಗಳೇನೂ ಅಲ್ಲ. ಆದರೆ ಈ ತಿಂಗಳಿನ ಬಣ್ಣಗಳದು ಕಣ್ಣು ಕೋರೈಸುವ ವರ್ಣವೈಭವವಲ್ಲ. ಆಷಾಢ ಎಂದಾಕ್ಷಣ ತಟ್ಟನೆ ನೆನಪಾಗುವುದು ಸೊಂಯ್ಯನೆ ಬೀಸುವ ಗಾಳಿ. ಮನಸ್ಸಿಗೆ ತಂಪಿನ ಸಿಂಚನ ನೀಡುವ ಈ ಗಾಳಿಯ ಸೊಬಗು ಬೇರೆ ಯಾವ ಮಾಸಕ್ಕಿದೆ ಹೇಳಿ!?

ಶುಭ ಸಮಾರಂಭಗಳಿಗೆ ಸಲ್ಲದ ಮಾಸ ಎಂದು ಹಿರಿಯರು ಆಷಾಢವನ್ನು ಅಲಕ್ಷಿಸಿದ್ದರೂ ಈ ಗಾಳಿಮಾಸದ ಬಗೆಗೆ ಮಕ್ಕಳಿಗೆ ಇನ್ನಿಲ್ಲದ ಪ್ರೀತಿ. ಚಿಣ್ಣರ ಗಾಳಿಪಟಗಳು ಬಾಲಂಗೋಚಿಗಳ ಬಿಚ್ಚಿಕೊಂಡು ಮುಗಿಲಿಗೆ ಮುತ್ತಿಡಲು ಹವಣಿಸುವುದು ಈ ತಿಂಗಳಲ್ಲೇ. ಗಾಳಿಪಟಗಳೊಂದಿಗೆ ಹಿರಿಯರೂ ಮಕ್ಕಳಾಗುತ್ತಾರೆ. ಆಕಾಶಕ್ಕೆ ಪಟ ಹಾರಿಬಿಟ್ಟು ಮನಸ್ಸಿನ ಭಾರ ಇಳಿಸಿಕೊಳ್ಳುತ್ತಾರೆ.

ಈ ಆಷಾಢದ ಗಾಳಿ ಮಳೆಯ ಸೊಬಗನ್ನು ಲೇಖಕಿ ಸುನಂದಾ ಪ್ರಕಾಶ ಕಡಮೆ ನೆನಪಿಸಿಕೊಂಡಿದ್ದಾರೆ. ಮರಾಠಿ ರಂಗಭೂಮಿಯಲ್ಲಿ ಸ್ತ್ರೀ ಪಾತ್ರಗಳಲ್ಲಿ ಛಾಪೊತ್ತಿದ ಮೇರು ಕಲಾವಿದ ಬಾಲಗಂಧರ್ವ ಅವರ ಬಗೆಗಿನ ಲೇಖನ ಈ ಸಂಚಿಕೆಯ ವಿಶೇಷ. ಕಲಾಸಾಧಕ ಕೆ.ಕೆ. ಹೆಬ್ಬಾರರ ಸ್ಮರಣೆ, ಕಥೆಗಾರ ಕುಂ. ವೀರಭದ್ರಪ್ಪ ಅವರ ಬಿಚ್ಚುನುಡಿ ಓದುಗರಿಗೂ ಇಷ್ಟವಾದೀತು.

**–ಸಂಪಾದಕ**